in writ Petition No 355/65 before the High Court and the counting of votes was also stayed. From that day onwards these things have continued, and the Administrator is now in charge of the Municipal Council.

Sri B. B. SAYANAK.—In answer to (b) it is stated that finally the High Court quashed the Government Notification reconstituting the territorial divisions in December 1968. May I know what action was taken by the Government after December 1968 upto January 1973?

Sri B. BASAVALINGAPPA.—The Division l Commissioner was directed to publish the calendar of events to hold elections, and the Government directed the Divigional Commissioner to hold the elections on the basis of 1971 census. Now the entire recommendations are before the Government. We have also approved the territorial divisions and we have given direction to issue the Notifiction as per the Act. In the meanwhile, we have asked the Divisional Commissioner to delay the publication of the calendar of events in view of the drought conditions.

Sri B. B. SAYANAK.—May I know whether Nipani is in drought conditions and the area declared as a drought area ?

Sri B. BASAVALINGAPPA.—The hon. member must tell me whether it is subject to drought conditions.

Sri B. B. SAYANAK.—When the Govenment have decided to conduct elections to Mangalore and Haliyal municipalities, why not in Nipani Municipality ?

Sri B. BASAVALINGAPPA.—Mangalore and Haliyal are not subject to dronght conditions but Nipani is a shadow on drought conditions. Now we are thinking about holding elections or not.

Widening of Asphalt Road on National Highway No.4

122: Sri B. G. BANAKAR (Hirekerur) —

Will the Minister for Public Works and Electricity be pleased to state :—

(*a*) whether Government intend to widen the asphalt portion of the road and the width of the bridges on the National High way No. 4 throughout so as to prevent accidents ;

(*b*) if so, the period within which it will be done ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) By the end of the Fifth Five Year Plan.

ಶ್ರೀ ಬಿ. ಜಿ. ಬಣಕಾರ್.—ಸ್ವಾಮಿ ಇಲ್ಲಿಯವರೆಗೂ 4ನೇ ಕ್ರಮಾಂಕದ ರಾಷ್ಟ್ರೀಯ ಹೆದ್ದಾರಿಯ ಜಿಲ್ಲೆಯ ರಸ್ತೆಯ ಅಗಲಅಳತೆಯನ್ನು ಹೆಚ್ಚು ಮಾಡಿದಂತಹ ರಸ್ತೆಗಳ ಉದ್ದ ಎಷ್ಟು; ಮತ್ತು ಎಷ್ಟು ಸೇತುವೆಗಳನ್ನು ಅಗಲ ಮಾಡಿದ್ದೀರಿ; ಅದಕ್ಕೆ ಎಷ್ಟು ಹಣ ಖರ್ಚಾಗಿದೆ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲೆಲ್ಲಿ, ಎಷ್ಟೆಷ್ಟು, ಹೇಗೆ ಮಾಡಿದ್ದಾರೆ ಎನ್ನುವ ವಿವರಗಳನ್ನು ಕೊಡುವುದು ಕಷ್ಟ. ಒಟ್ಟಿನಲ್ಲಿ 4ನೇ ಕ್ರಮಾಂಕದ ರಾಷ್ಟ್ರೀಯ ಹೆದ್ದಾರಿಗೆ ಈ ಕೆಲಸಕ್ಕೋಸ್ಕರ 13 ಕೋಟಿ 56 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಆಗಿತ್ತು. ಆ ಬಗ್ಗೆ 9 ಕೋಟಿ 41 ಲಕ್ಷ ರೂಪಾಯಿಗಳು ಮಂಜೂರಾಗಿದೆ. ಇನ್ನೂ 2 ಕೋಟಿ 93 ಲಕ್ಷ ರೂಪಾಯಿಗಳು ಮಂಜೂರಾಗಿ ಬರಬೇಕಾಗಿದೆ.

ಶ್ರೀ ಬಿ. ಜಿ ಬಣಕಾರ್.—ನ್ಯಾಷನಲ್ ಹೈವೇನಲ್ಲಿ ಎಲ್ಲಾ ಕಡೆಗಳಲ್ಲಿಯೂ ರಸ್ತೆಗಳು ಕೆಟ್ಟು ಹೋಗಿದ್ದರೆ ಮೈಲಿ ಕೂಲಿಗಳು ಅದರ ಜನರಲ್ ರಿಪೇರಿಯನ್ನು ಮಾಡುತ್ತಾರೆಯೇ ಅಥವಾ ಇಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈಲಿ ಕೂಲಿಗಳು ಸ್ಪೆಷಲ್ ರಿಪೇರಿ ಮಾಡುವುದಕ್ಕಾಗುವುದಿಲ್ಲ. ರಸ್ತೆಗಳ ಮೈಂಟೆನೆನ್ಸ್ ವರ್ಕ್‌ಗೋಸ್ಕರ ಮೈಲಿಕೂಲಿಗಳನ್ನು ಇಟ್ಟುಕೊಂಡಿದೆ. ಸ್ಪೆಷಲ್ ರಿಪೇರಿ ಬಂದಾಗ ಅವಕ್ಕೆ ಗ್ರಾಂಟು ಕೊಟ್ಟು ಆ ಕೆಲಸವನ್ನು ಮಾಡಲಾಗುತ್ತದೆ.

ಶ್ರೀ ಬಿ. ಜಿ. ಬಣಕಾರ್.—ಹುಬ್ಬಳ್ಳಿ ಧಾರವಾಡದ ಮಧ್ಯೆ ನ್ಯಾಷನಲ್ ಹೈವೇ ರಸ್ತೆ ಹೋಗುತ್ತದೆ. ಆದ್ದರಿಂದ ಅಲ್ಲಿ ಜಾಸ್ತಿ ಅಪಘಾತಗಳು ಆಗುತ್ತವೆ. ಆದ್ದರಿಂದ ಅದನ್ನು ತಪ್ಪಿಸುವುದಕ್ಕೆ ಕಾರ್ಪೊರೇಷನ್ ಲಿಮಿಟ್‌ನಿಂದ ಹೊರಗಡೆ ಈ ನ್ಯಾಷನಲ್ ಹೈವೇಯನ್ನು ತೆಗೆದುಕೊಂಡು ಹೋಗುವ ಯೋಚನೆಯನ್ನೇನಾದರೂ ಸರ್ಕಾರದವರು ಇಟ್ಟುಕೊಂಡಿದ್ದಾರೆಯೇ ಮತ್ತು ಇದರ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಂಡಿದ್ದಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲೆಲ್ಲಿ ಪಟ್ಟಣಗಳ ಮಧ್ಯೆ ರಸ್ತೆಗಳು ಕಿರಿದಾಗಿವೆ ಅಂಥಾ ಕಡೆಗಳಲ್ಲಿ ಮತ್ತು ಎಲ್ಲೆಲ್ಲಿ ಜನಗಳ ಟ್ರಾಫಿಕ್ ಜಾಸ್ತಿ ಇದೆ ಅಂಥಾ ಕಡೆಗಳಲ್ಲಿ ಅಕ್ಸಿಡೆಂಟ್‌ಗಳು ಆಗುತ್ತವೆ. ಆದ್ದರಿಂದ ಅವಶ್ಯಕತೆ ಇದ್ದ ಕಡೆಗಳಲ್ಲಿ ಹೊರವಲಯಗಳಿಂದ ನೇರವಾಗಿ ಬೈಪಾಸ್ ಮಾಡಬೇಕೆಂದು ಸರ್ಕಾರದವರು ಮನಗಂಡು ಅದಕ್ಕೆ ಬೇಕಾದ ಅಂದಾಜುಗಳನ್ನು ತಯಾರು ಮಾಡಿ ಅವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಅವರ ಅಪ್ರೂವಲ್ ತೆಗೆದುಕೊಂಡು ಅದಕ್ಕೆ ಬೇಕಾದ ಹಣ ದೊರಕಿದಂತೆ ಆ ಕೆಲಸವನ್ನು ಮಾಡುತ್ತೇವೆ.

ಶ್ರೀ ಎಂ. ಮಲ್ಲಪ್ಪ.—ರಾಷ್ಟ್ರೀಯ ಹೆದ್ದಾರಿಗಳು ಬಹಳ ದುರವಸ್ಥೆಯಲ್ಲಿದ್ದು ಅದಕ್ಕೆ ಒದಗಿನತಕ್ಕ ಹಣ ಖರ್ಚಾಗದೆ ಲ್ಯಾಪ್ಸ್ ಆಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಅದನ್ನು ಉತ್ತಮ ಪಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಹಣ ಖರ್ಚಾಗದೆ ಲ್ಯಾಪ್ಸ್ ಆಗುತ್ತಾ ಇರುವುದು ನಮ್ಮಗೆ ಕಂಡು ಬಂದಲ್ಲಿ ಅಂಥಾದ್ದನ್ನು ಸರಿಪಡಿಸಬೇಕು ಎಂದು ಮತ್ತು ನ್ಯಾಷನಲ್ ಹೈವೇ ನಿರ್ಮಾಣಕಾರ್ಯದಲ್ಲಿ ವಿಳಂಬವನ್ನು ತಪ್ಪಿಸಬೇಕೆಂದೂ ಮೊನ್ನೆ ದಿವಸ ದೆಹಲಿಯಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಎಲ್ಲಾ ರಾಜ್ಯದ ಪ್ರತಿನಿಧಿಗಳೂ ಹಾಜರಿದ್ದರು. ನ್ಯಾಷನಲ್ ಹೈವೇ ಎಸ್ಟಿಮೇಟ್ ಮತ್ತು ಸ್ಪೆಸಿಫಿಕೇಷನ್‌ಗಳನ್ನು ಸ್ಯಾಂಕ್ಷನ್ ಮಾಡತಕ್ಕದ್ದು ರಿವೈಸ್ ಮಾಡತಕ್ಕದ್ದು ಮತ್ತು ಸ್ಯಾಂಕ್ಷನ್ ಮಾಡತಕ್ಕ ಎಜೆನ್ಸಿಯನ್ನು ಫಿಕ್ಸ್ ಮಾಡತಕ್ಕದ್ದು, ಇವೆಲ್ಲವೂ ಒಂದು ಕಡೆ ಕೇಂದ್ರೀಕೃತವಾಗಿರುವುದರಿಂದ ಇದರ ಬಗ್ಗೆ ಕಾರ್ಯಕ್ರಮಗಳು ತುರ್ತಾಗಿ ನಡೆಯುವುದು ಕಷ್ಟವಾಗಿದೆ. ಆದ್ದರಿಂದ ಅವೆಲ್ಲವನ್ನೂ ವಿಕೇಂದ್ರೀಕರಣ ಮಾಡಬೇಕೆಂದು ಎಲ್ಲಾ ರಾಜ್ಯಗಳ ಅಭಿಪ್ರಾಯವಾಗಿದೆ. ಇಷ್ಟರಲ್ಲಿಯೇ ಟ್ರಾನ್ಸ್‌ಪೋರ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ಅದಕ್ಕೆ ಒಂದು ಕಮಿಟಿಯನ್ನು ಮಾಡಿ ಅವರಿಂದ ಶಿಫಾರಸ್ಸು ಬಂದಮೇಲೆ, ಅಧಿಕಾರ ವಿಕೇಂದ್ರೀಕರಣವಾದ ಮೇಲೆ ಕೆಲಸ ಸುಲಲಿತವಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ.

Sri. S. M. YAHYA.—On the National Highway traffic is increasing day by day and due to speed, accidents occur quite frequently. What steps will the Government take to prevent danger to life?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಾಷ್ಟ್ರೀಯ ಹೆದ್ದಾರಿಯಲ್ಲಿ ಎಲ್ಲೆಲ್ಲಿ ಆಕ್ಸಿಡೆಂಟ್‌ಗಳು ಆಗುತ್ತವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಇದರಲ್ಲಿ ವಾಹನಗಳು ವೇಗವಾಗಿ ಹೋಗತಕ್ಕಂಥಾದ್ದು ಒಂದು ಮುಖ್ಯ ಕಾರಣ. ಒಂದೊಂದು ವೇಳೆ ಡ್ರೈವರುಗಳು ಮದ್ಯಪಾನ ಮಾಡಿ ಬಹಳ ಸ್ಪೀಡಿನಲ್ಲಿ ಹೋಗತಕ್ಕಂಥಾದ್ದು ಒಂದು ಕಾರಣ. ಇದು ಕೇಂದ್ರ ಸರ್ಕಾರದವರ ಗಮನಕ್ಕೂ ಮತ್ತು ರಾಜ್ಯ ಸರ್ಕಾರದವರ ಗಮನಕ್ಕೂ ಬಂದಿದೆ. ಇದನ್ನು ತಪ್ಪಿಸುವುದಕ್ಕೋಸ್ಕರ ಏನು ಮಾಡಬೇಕು ಎನ್ನುವುದು ಬಹಳ ಮುಖ್ಯ. ಈಗ ಇಂಗ್ಲೆಂಡಿನಲ್ಲಿ ಒಂದು ತರಹ ಟೀಲಗಳು ಇವೆ. ಆ ಟೀಲಗಳನ್ನು ಬಾಯಿಂದ ಹಾ ಎಂದು ಊದಿದರೆ ಡ್ರೈವ್ ಮಾಡುವವರು ಹೆಜ್ಜೆ ಕೊಡಿದಿದ್ದರೆ ಆದರ ಬಣ್ಣ ಬದಲಾವಣೆಯಾಗುತ್ತದೆ. ಇಂಥಾ ಟೀಲಗಳನ್ನು ಇಂಗ್ಲೆಂಡಿನಲ್ಲಿ ಉಪಯೋಗ ಮಾಡುವುದರಿಂದ ಬಹಳ ಪಾಟ್ಸಿಗೆ ಆಕ್ಸಿಡೆಂಟ್‌ಗಳು ಕಡಿಮೆಯಾಗಿವೆ ಎಂದು ವರದಿ ಬಂದಿದೆ. ನಾವು ಇಂಥಾ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ನ್ಯಾಷನಲ್ ಹೈವೇ ಬಗ್ಗೆ ಟ್ರಾನ್ಸ್‌ಪೋರ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ತೀರ್ಮಾನವಾಗುತ್ತದೆ.

ಶ್ರೀ ಎಂ. ಎಸ್. ಜಯಪ್ರಕಾಶ್‌ನಾರಾಯಣ್.—4ನೇ ಕ್ರಮಾಂಕದ ರಾಷ್ಟ್ರೀಯ ಹೆದ್ದಾರಿಯ ಜಿಲ್ಲೆ ರಸ್ತೆಯ ಅಗಲಳತೆಯನ್ನು ಹೆಚ್ಚಿಸುವುದಕ್ಕೋಸ್ಕರ ಐದನೇ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗಾಗಿ ಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಹೇಳಿದ್ದೀರಿ, ರಾಷ್ಟ್ರೀಯ ಹೆದ್ದಾರಿಯನ್ನು ಆ ರೀತಿ ಮಾಡುವುದಕ್ಕೆ ಪಬ್ಲಿಕ್ ವರ್ಕ್ಸ್ ಇಲಾಖೆಗೆ ರಾಜ್ಯಸರ್ಕಾರದವರಾಗಲೀ ಕೇಂದ್ರಸರ್ಕಾರದವರಾಗಲೀ ಹಣವನ್ನು ಒದಗಿಸದೇ ಇರುವುದರಿಂದ ಏದು ಕುಂಠಿತವಾಗಿದೆ ಅಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಆಗಲೇ ಹೇಳಿದೆ—ರಾಷ್ಟ್ರೀಯ ಹೆದ್ದಾರಿಗಳನ್ನು ಕ್ರಮವಾಗಿ ಮತ್ತು ತೀವ್ರವಾಗಿ ಮಾಡುವುದಕ್ಕೆ ಮುಖ್ಯವಾದ ಅಡಚಣೆ ಹಣವಲ್ಲ ; ಇನ್ನಿತರ ಕಾರಣಗಳೂ ಇವೆ. ಮೊದಲನೆಯದಾಗಿ ಅಧಿಕಾರ ವಿಕೇಂದ್ರೀಕರಣ, ಭೂಮಿಯನ್ನು ಆಕ್ವಯರ್ ಮಾಡಿಕೊಳ್ಳತಕ್ಕ ಕೆಲಸ ಮತ್ತು ಇತರ ಸಣ್ಣಪುಟ್ಟ ಕಾರಣಗಳು ಅಡಚಣೆಯಾಗಿವೆ.

ಶ್ರೀ ಬಿ. ಜಿ. ಬಣಕಾರ್.—ರಾಜ್ಯದಲ್ಲಿ ಅನೇಕ ಕಡೆ ಬರಗಾಲ ಇರುವುದರಿಂದ ಬಿಲ್ಲರತಕ್ಕ ಕೂಲಿಗಾರ ಜನರನ್ನು ಈ ನ್ಯಾಷನಲ್ ಹೈವೇಸ್ ಕೆಲಸಕ್ಕೆ ಕರೆಸಿಕೊಂಡು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಾಗಲೇ ಅದನ್ನು ಮಾತುತ್ತಿದ್ದೇವೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ರಾಷ್ಟ್ರೀಯ ಹೆದ್ದಾರಿಗಳಲ್ಲಿ ಇರತಕ್ಕ ಸಾಲುಮರಗಳು ಮೊದಲು ರೆವೆನ್ಯೂ ಇಲಾಖೆಯ ವಶದಲ್ಲಿ ಇದ್ದಾಗ ಚೆನ್ನಾಗಿತ್ತು. ಈಗ ತಮ್ಮ ಇಲಾಖೆಗೆ ಬಂದ ಮೇಲೆ ಹಾಳಾಗುತ್ತಾ ಇವೆ. ಇವನ್ನು ಚೆನ್ನಾಗಿ ಇಟ್ಟುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಅವು ನಮ್ಮ ಇಲಾಖೆಯ ವಶದಲ್ಲಿ ಇಲ್ಲವೆಂಬುದನ್ನು ತಾವು ಬಹುಶಃ ತಿಳಿದಿಲ್ಲವೆಂದು ಕಾಣುತ್ತದೆ.

Sri S. M. YAHYA.—The Central Government has taken over the maintenance of all the National Highways and they are financing the improvement of these roads. That being the case may I know whether the State Government has any jurisdiction over these roads or not ?

Sri H. M. CHANNABASAPPA.—The Hon. Member does not seem to know the arrangements in regard to the National Highways. The National Highways are always financed by the Central Government ; but they are actually maintained and all works done by the State Government as an agency of Central Government and even the maintenance will be looked after by the State Government.

Sri M. S. KRISHNAN.—On one side you stated that the National Highways are centralised and for a question just now put, you say that there is no difficulty for finance and the execution is done by the State Government. Now there seems to be some contradiction and how do you explain that contradiction ?

Sri H. M. CHANNABASAPPA.—There is no contradiction. It is true that the Government of India provides funds for the National Highways but the difficulty is about the sanction to the e timates. At every level there is centralisation. Though money is made available to us,-our people will be ready to work, the difficulty is, at every stage even for a small sanction, it has to go to the Central Government. If once a query is put, it will take three months for the query to be answered. By the time the sanction is accorded, the estimates will have gone up. All these things are matters which are causing a terrible delay. This question was discussed at very great length and it was the unanimous view of all the State Governments P.W. Ministers that the centralisation must go if all the monies that are made available could be spent and spent usefully.

ಶ್ರೀ ಎಚ್. ಎಂ. ಸಿದ್ದಪ್ಪ.—ರಾಜ್ಯದ ಹೆದ್ದಾರಿಗಳನ್ನು ಯಾವುದನ್ನಾದರೂ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಬೇಕೆಂದು ಸರ್ಕಾರದ ಪರಿಶೀಲನೆಯಲ್ಲಿ ಇವೆಯೇ ; ಮತ್ತು ಅದರ ಬಗ್ಗೆ ಸಾರ್ವಜನಿಕರ ಬಗ್ಗೆ ಏನಾದರೂ ಮನವಿಗಳು ಬಂದಿವೆಯೇ ; ಬಂದಿದ್ದರೆ ಅವನ್ನು ಯಾವಾಗ ಮತ್ತು ಹೇಗೆ ಮಾಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಾಜ್ಯದ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಬೇಕಾದರೆ ಅದಕ್ಕೆ ಕೆಲವು ನಿಯಮಗಳು ಇವೆ. ಆ ನಿಯಮಗಳಿಗನುಸಾರವಾಗಿ ನಾವು ಕೇಂದ್ರಕ್ಕೆ ಶಿಫಾರಸು ಮಾಡಬೇಕಾಗಿತ್ತದೆ. ಈಗಾಗಲೇ ನಾವು ಅನೇಕ ರಾಜ್ಯದ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾಡಬೇಕೆಂದು ಶಿಫಾರಸು ಮಾಡಿದ್ದೇವೆ. ಅವುಗಳ ಬಗ್ಗೆ ಅನುಮತಿಯನ್ನು ಕಾಯುತ್ತಿದ್ದೇವೆ.

Construction of Bus Stand at Tumkur

217. Sri R. CHIKKAIAH (Madhugiri).—

Will the Minister for Labour be pleased to state :—

(*a*) the number of Mysore State Road Transport Corporation buses running from Bangalore to other places *via* Tumkur ;

(*b*) whether it has come to the notice of the Government that a bus stand with shelter is very essential at Tumkur for the convenience of the Travelling Public ;

(*c*) whether they have any plan for the construction of Mysore State Road Transport Corporation bus stand at Tumkur ;

(*d*) if not, the reasons for the same ?

Sri V. S. KOUJALGI (Minister of State for Youth Services) [on bahalf of Sri AZZEEZ SAIT (Minister for Labour)].—

(*a*) 60 buses.

(*b*) No.

(*c*) No.